# ನೇಸರು

ತಿಂಗಳೋಲೆ

ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol. IX No. 1 ಜನವರಿ 1991



**1991 THE YEAR OF TOURISM**

**The Mysore Association, Bombay**
393, Bhaudaji Road, Matunga, Bombay 400 019.
Tel. : 4374647 / 4379574 Grams : "KARUNADU"

# ಕರ್ನಾಟಕ ಪ್ರವಾಸ

- ಭವಾನಿ

1991ರ ವರ್ಷವನ್ನು ನಮ್ಮ ಸರಕಾರ ಪ್ರವಾಸೋದ್ಯಮ ವರ್ಷವೆಂದು ಸಾರಿದೆ. ಈ ಸಮಯದಲ್ಲಿ ನಮ್ಮ ಸುಂದರ ಕರ್ನಾಟಕದಲ್ಲಿರುವ ಅನೇಕ ಪ್ರೇಕ್ಷಣೀಯ ಸ್ಥಳಗಳಲ್ಲಿ ಕೆಲವನ್ನು ಆರಿಸಿ ಆಸಕ್ತ ಓದುಗರಿಗಾಗಿ ಇಲ್ಲಿ ಪ್ರಯತ್ನವನ್ನು ಮಾಡಿದ್ದೇನೆ.

ಕರ್ನಾಟಕದ ಯಾವ ಭಾಗಕ್ಕೆ ಹೋದರೂ ನೋಡತಕ್ಕಂಥ ಸ್ಥಳ ವಿಶೇಷವಿರುವುದು ಕಂಡುಬರುತ್ತೆ. ಬೆಂಗಳೂರು, ಮೈಸೂರು, ಧಾರವಾಡ, ಹುಬ್ಬಳ್ಳಿ. ಮಂಗಳೂರು, ಬಿಜಾಪುರ, ಬೀದರ್ ಮುಂತಾದವು. ಸಾಕಷ್ಟು ಹೆಸರುವಾಸಿ ಶಹರ ಪ್ರದೇಶಗಳಾದರೆ, ಬೆಲೂರು ಹಳೇಬೀಡು, ಶ್ರವಣಬೆಳಗೊಳ, ಹಂಪೆ, ಬಾದಾಮಿ, ಪಟ್ಟದಕಲ್ಲು, ಐಹೊಳೆ ಮುಂತಾದವು, ಶಿಲ್ಪಕಲೆ ಹಾಗೂ ಉತ್ತಮ ವಾಸ್ತು ಶಿಲ್ಪಗಳ ಪ್ರತೀಕವಾಗಿ ವಿಶ್ವದಾದ್ಯಂತ ಮನ್ನಣೆಗಳಿಸಿವೆ. ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಕೆಮ್ಮಣ್ಣು ಗುಂಡಿ, ಬೆಳಗಾವಿ ತಂಪು ಧಾಮಗಳಾಗಿ ಜನರನ್ನು ಆಕರ್ಷಿಸುತ್ತಿದ್ದರೆ ದಕ್ಷಿಣ ಕನ್ನಡ, ಉತ್ತರ ಕನ್ನಡದ ಉದ್ದಕ್ಕೂ ಹರಡಿರುವ ಉತ್ತಂಗ ಗಿರಿ ಸಹ್ಯಾದ್ರಿಯ ಶ್ರೇಣಿಗಳು ಅರಣ್ಯವೃತ ಪ್ರದೇಶಗಳಾಗಿದ್ದು, ಹವ್ಯಾಸಿ ಪರ್ವತಾರೋಹಿಗಳಿಗೆ ಯಾವಾಗಲೂ 'ಥ್ರಿಲ್' ಹಾಗೂ 'ಛಾಲೆಂಜ್'ಅನ್ನೂ ಒದಗಿಸುತ್ತದೆ. ಇಲ್ಲೆಲ್ಲಾ ಅನೇಕ ನದಿಗಳ ಪ್ರವಾಹಗುಂಟ ಸಣ್ಣದೊಡ್ಡ ಜಲಪಾತಗಳಿದ್ದು ಅವುಗಳದ್ದೇ ಒಂದು ವಿಶೇಷ ಆಕರ್ಷಣೆ. ಉಡುಪಿ, ಶೃಂಗೆರಿ, ಬಸವಕಲ್ಯಾಣ, ಮೇಲು ಕೋಟೆ, ಶ್ರಾವಣಬೆಳಗೊಳ, ಧರ್ಮಸ್ಥಳ, ಗೋಕರ್ಣ ಇವುಗಳು ಪವಿತ್ರ ತೀರ್ಥ ಕ್ಷೇತ್ರಗಳಾಗಿವೆ. ಹೊಸಪೇಟೆ, ಚಿತ್ರದುರ್ಗ, ಕಿತ್ತೂರು, ಗುಲ್ಬರ್ಗಾ, ರಾಯಚೂರು, ಬೀದರ್‌ಗಳಲ್ಲಿ ಅಳಿದ ರಾಜಮನೆತನಗಳ ಕುರುಹುಗಾಗಿ ಕೋಟೆ ಕೊತ್ತಲಗಳು ಇತಿಹಾಸ ಪ್ರೇಮಗಳಿಗೆ ಗತಕಾಲದ ವೈಭವವನ್ನು ಸಾರಿ ಹೇಳುತ್ತದೆ. ಇದರಲ್ಲಿ ಶ್ರೀರಂಗ ಪಟ್ಟಣ ಕಾವೇರಿನದಿಯಿಂದ ವೃತ್ತವಾದ ಸುಂದರ ದ್ವೀಪ ಪ್ರದೇಶವೂ ಆಗಿದೆ. ಶ್ರೀರಂಗ ಪಟ್ಟಣದ ಹತ್ತಿರವಿರುವ ರಂಗನ ತಿಟ್ಟು, ಒಂದು ಅಪರೂಪದ ಪಕ್ಷಿಧಾಮ. ಬಂಡಿಪುರ, ನಾಗರ ಹೊಳೆ, ದಾಂಡೇಲಿ, ಚಿಕ್ಕಮಗಳೂರು ಜಿಲ್ಲೆ ಮುತ್ತೋಡಿಯ ಬಳಿಯ ಭದ್ರಾ, ತಾವರೆ ಕೊಪ್ಪದ ಬಳಿಯ ಶೆಟ್ಟಿ ಹಳ್ಳಿ ಮೊದಲಾದವು ಅರಣ್ಯ ಧಾಮಗಳಿದ್ದು, ಅನೇಕ ವನ್ಯ ಜೀವಿಗಳ ಆವಾಸ ಸ್ಥಾನವಾಗಿದೆ. ಮಂಗಳೂರಿನಿಂದ ಕಾರವಾರದವರೆಗೆ ಉದ್ದಕ್ಕೂ ಹಬ್ಬಿರುವ ಕರಾವಳಿ, ತೀರ ಪ್ರದೇಶವನ್ನು ಬಯಸವವರಿಗೆ ಒಂದು ಸ್ವರ್ಗ. ಮಲ್ಪೆ, ಹೊನ್ನಾವರ, ಭಟಕಲ, ಬೈಂದೂರು, ಕುಂದಾಪುರ ಎಲ್ಲೆಲ್ಲೂ ಸ್ವಚ್ಛ ಮರಳ ರಾಶಿಯ ತೀರದಿಂದ ಸೂರ್ಯಾಸ್ತ ವೀಕ್ಷಣೆ ಅವರ್ಣನೀಯ ಆನಂದವನ್ನು ಕೊಡುತ್ತದೆ. ಅಲೆಯಲೆಯಾಗಿ ಹೊಡೆಯುವ ನೀರ ರಾಶಿಯಲ್ಲಿ ಮೀಯುವ ಸುಖ, ಹಾಗೂ ಕಣ್ಮನ ತಣಿಸುವ ಆ ದೃಶ್ಯದ ಬಗ್ಗೆ ಬೇರೆ ಬರಿಯ ಬೇಕಿಲ್ಲ.

ಕರ್ನಾಟಕದ ಮೂಲೆ ಮೂಲೆಯಲ್ಲೂ ಇತಿಹಾಸದೊಂದಿಗೆ ಸೆರಿ ಹೋದ ಅನೇಕಾನೇಕ ಸುಂದರ ದೇವಾಲಯಗಳು ಜನರ ಕಲಾಪ್ರಜ್ಞೆಯನ್ನು ಎತ್ತಿಸಾರುತ್ತವೆ. ಕರ್ನಾಟಕ ಸಮಶೀತೋಷ್ಣ ಹವಾಗುಣ ಸಹ, ಪರಿಸರ ಪ್ರೇಮಿಗಳಿಗೆ, ಪ್ರವಾಸಿಗಳಿಗೆ ಅನುಕೂಲಕರವಾಗಿದೆ. ಇಂಥದರಲ್ಲಿ ಯಾವೊಂದು ತಾಣವನ್ನು ಆರಿಸಿಕೊಳ್ಳುವುದು ಬಹಳ ಕಷ್ಟದ ಕೆಸಲ. ಮೇಲೆ ಹೆಸರಿಸಿರುವ ಎಲ್ಲ ಬಗೆಯ ಆಕರ್ಷಣೆಯನ್ನೂ ಹೊಂದಿರುವ ಚಿಕ್ಕಮಗಳೂರು ಜಿಲ್ಲೆ ಸೇರಿದ ಭಾಗದ ಅಂಶತಃ ವಿವರವನ್ನು ಈ ಕೆಳಗೆ ಕಾಣಿಸುತ್ತಿದ್ದೇನೆ.

ಕರ್ನಾಟಕದ ಸಹ್ಯಾದ್ರಿಬೆಟ್ಟಗಳ ಸಾಲಿನ ಪೂರ್ವ ತಪ್ಪಲಲ್ಲಿರುವ ಚಿಕ್ಕಮಗಳೂರು ಜಿಲ್ಲೆ ಕಾಫಿತೋಟಗಳಿಗೆ ಬಹಳ ಪ್ರಸಿದ್ಧವಾಗಿದೆ. ಆದರೆ ಭಾರತದಲ್ಲಿ ಕಾಫಿಯ ಅವತಾರವಾಗುವ ಮೊದಲೇ ಈ ಸ್ಥಳ ಬಹಳ ಪ್ರಸಿದ್ಧಿಗೆ ಬರಲು ಕಾರಣ ಹೊಯ್ಸಳ ರಾಜ್ಯರಾಂಭ ಹೊಯ್ಸಳರ ಮೂಲವಂಶಸ್ಥನಾದ ಸಳನುತನ್ನ ಗುರುಗಳ ಅಪ್ಪಣೆಯನ್ನು ಪಾಲಿಸಲು ಹುಲಿಯನ್ನು ಹೊಡೆದ ಸ್ಥಳ, ಸೊಸೆ ಊರು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಲ್ಲೂಕಿನ ಅಂಗಡಿ ಎಂಬ ಊರಿಗೆ ಸಮೀಪದಲ್ಲಿದೆ. ಜಿಲ್ಲೆಯ ಕೇಂದ್ರಾಸ್ಥಾನವಾದ ಚಿಕ್ಕಮಗಳೂರು ಬಾಬಾ ಬುಡನ್‌ಗಿರಿಯ ದಕ್ಷಿಣ ಭಾಗದಲ್ಲಿದ್ದು ಅತ್ಯಂತ ಹಿತಕರವಾದ ಹವಾಗುಣವನ್ನೂ ಹೊಂದಿದೆ. ತಂಪು ಧಾಮಗಳನ್ನು ಹುಡುಕಿಕೊಂಡು ಹೋಗುವವರು ಈ ಸ್ಥಳವನ್ನೂ ಒಮ್ಮೆಯಾದರೂ ಆನಂದಸಲೇ ಬೆಕಾದಂಥ ಊರು. ಇಲ್ಲಿಗೆ ಹತ್ತಿರದಲ್ಲೇ ಇರುವ ಹಿರೇಮಗಳೂರಿನ ಕೋದಂಡ 'ರಾಮನ ದೇವಸ್ಥಾನ ಸುಂದರ ಶಿಲ್ಪ ಕಲೆಯಿಂದ ಕೂಡಿದೆ. 'ಖಾಂಡ್ಯ' ಎಂಬ ಪಂಚಕ್ಷೇತ್ರ ಭದ್ರಾನದಿಯ ದಡದಲ್ಲಿ ಚಿಕ್ಕಮಗಳೂರಿನಿಂದ 43ಕಿ.ಮೀ. ಈಶಾನ್ಯಕ್ಕಿದೆ. ಬಾಬಾ ಬುಡನ್‌ಗಿರಿ ಒಂದು ಯಾತ್ರಾ ಸ್ಥಳವಾಗಿದ್ದು ಇಲ್ಲಿನ ಇನಾಂದತ್ತಾತ್ರೇಯ ಪೀಠ ಹಿಂದೂ ಮುಸ್ಲಿಂ ಬಾಂಧವರಿಬ್ಬರಿಗೂ ಪವಿತ್ರಾಕ್ಷೇತ್ರವಾಗಿದೆ. ಸುತ್ತಮುತ್ತಲು ದೃಶ್ಯ ನಯನ ಮನೋಹರ, ಮಾಣಿಕ್ಯ ದಾರಾ, ಗದಾತೀರ್ಥ, ಕಾಮನ ತಾರ್ಥ ಇವು ಮೂರು ಇಲ್ಲಿನ ಹೆಸರುವಾಸಿ ಜಲಧಾರೆಗಳು.

ಶೃಂಗೇರಿ ಚಿಕ್ಕಮಗಳೂರಿನಿಂದ 90 ಕಿ.ಮೀ. ಪಶ್ಚಿಮಕ್ಕೆ ತುಂಗಾನದಿ ತೀರದಲ್ಲಿದ್ದು ಇಲ್ಲಿನ ವಿದ್ಯಾಶಂಕರ ಮಂದಿರ ಪ್ರವಾಸಿಗಳು ಆಕರ್ಷಿಸುತ್ತದೆ. ಶೃಂಗೇರಿಯು ಶಂಕರಾಚಾರ್ಯ ಪೀಠವು ಅದ್ವೈತವಾದ ಕೇಂದ್ರಸ್ಥಾನವಾಗಿದೆ. ಹೆಸರೇ ತಿಳಿಸುವಂತೆ (ಶೃಂಗಗಿರಿ) ಈ ಸ್ಥಳವು ಗಿರಿಯ ತುದಿಯಲ್ಲಿದ್ದು ಸುತ್ತಲ ಶಾಂತ ಪ್ರದೇಶ ಅವರ್ಣನೀಯ ಅನುಭವವನ್ನು ಕೊಡುತ್ತದೆ. ಇಲ್ಲಿ ಪಾರ್ಶ್ವನಾಥ ತೀರ್ಥಂಕರರ ಬಸದಿಯೂ ಇದೆ. ಚಿಕ್ಕಮಗಳೂರಿನಿಂದ 45 ಕಿ.ಮೀ. ದೂರದಲ್ಲಿ ಬಾಳೆ ಹೊನ್ನೂರಿನಲ್ಲಿ ಜಗದ್ಗುರು ಶಂಭಾಪುರಿ ವೀರನರಸಿಂಹಾಸನ ಮಹಾಸಂಸ್ಥಾನ ಪೀಠವಿದೆ.

ಬೆಳವಾಡಿಯ ವೀರನಾರಾಯಣ ದೇವಾಲಯ ಮರಳಿಯ ಚೆನ್ನಕೇಶವದೇವಾಲಯ ಹಾಗೂ ಅಮೃತಪುರದ ಅಮೃತೇಶ್ವರ ದೇವಾಲಯಗಳು ಅತ್ಯಂತ ಸುಂದರವಾದ ಹೊಯ್ಸಳ ವಾಸ್ತುಶಿಲ್ಪ ಹೊಂದಿದೆ.

ಕೆಮ್ಮಣ್ಣು ಗುಂಡಿ, ಹೊರನಾಡು, ಕಳಸ, ಕುದುರೆಮುಖ ಇವು ತಂಪು ಧಾಮಗಳು. ಸುತ್ತಲೂ ಕಾಡಿನಿಂದಾವೃತವಾದ ಕಣಿವೆ, ನದಿ, ಝುರಿ, ಜಲಧಾರೆಗಳಿಂದ ಕೂಡಿದ ಈ ಪ್ರದೇಶ ಅತ್ಯಂತ ಸಹಜ ಸುಂದರ ಪ್ರಕೃತಿಯ ಆನಂದವನ್ನು ಕೊಡುತ್ತದೆ. ಕೆಮ್ಮಣ್ಣುಗುಂಡಿಯ ಇನ್ನೊಂದು ಪ್ರಮುಖ ಆಕರ್ಷಣೆ ಕಾಳಹತ್ತಿ ಜಲಧಾರೆ.

ಚಿಕ್ಕಮಂಗಳೂರಿನಿಂದ 38 ಕಿ.ಮೀ. ಈಶಾನ್ಯಕ್ಕೆ ಭದ್ರಾ ಅರಣ್ಯ ಧಾಮವಿದೆ. ಪ್ರಾಣಿ ಪರಿಸರ ಪ್ರೇಮಿಗಳಿಬ್ಬರಿಗೂ ಸಂತೋಷವನ್ನೂ ಕೊಡುವ ಈ ತಾಣದಲ್ಲಿ ಅನೇಕ ವಿಧದ ಪ್ರಾಣಿ ಪಕ್ಷಿಗಳನ್ನು ಕಾಣಬಹುದಾಗಿದೆ.

ಇನ್ನು ಪರ್ವತಾರೋಹಿಗಳಿಗೂ ಸಹ ಇಲ್ಲಿ ಅನೇಕ ಆಕರ್ಷಣೆಗಳಿವೆ. ಕುದುರೆಮುಖ, ಶೃಂಗೇರಿ, ಹೊರನಾಡು ಮೊದಲಾದುವನ್ನು ಕಾಲ್ನಡಿಗೆಯಲ್ಲಿ ತಲುಪಬಯಸುವವರು ಟ್ರೆಕ್ಕಿಂಗ್ ಮಾಡಿಕೊಂಡು ಹೋಗಬಹುದಾಗಿದೆ. ಸಂಸೆಯಿಂದ ಕುದುರೆಮುಖಕ್ಕೆ ಹೋಗಿ ಹಿಂತಿರುಗಿ ಸಂಸೆಗೆ ಬರಲು 45 Km. ಹೇವಳ ಹಾಗೂ ಕುದುರೆಮುಖದಲ್ಲಿ ತಂಗಲು ಅವಕಾಶವಿದೆ. ನಾವೂರು ಹೇವಳ ಹಾಗೂ ಕುದುರೆಮುಖ ಹೀಗೂ ಹೋಗಿ ನಾವೂರಿಗೆ ಹಿಂತಿರುಗಿ ಬರಬಹುದಾಗಿದೆ. ಇಲ್ಲಿ 65 Km. ಕ್ರಮಿಸಲು 5 ದಿನಗಳು ಬೇಕಾಗುತ್ತವೆ. ಹೊರನಾಡಿನಿಂದ ಶೃಂಗೇರಿಗೆ ಹೋಗಿಬರಲು 2 ದಿನಗಳು ಬೆಕಾಗುತ್ತದೆ. 30Km. ದಾರಿ. ಹೊರನಾಡು, ಶೃಂಗೇರಿ ಅಲ್ಲದೆ ಹೆಗ್ಗರಗುಡಿಯಲ್ಲಿ ತಂಗಬಹುದಾಗಿದೆ.

ಕಡೂರು ತಾಲೂಕಿನ ಅಯ್ಯನಕೆರೆಯು ವಿಸ್ತಾರ ವಿಶಾಲವಾದುದು. ಬಾಬಾ ಬುಡನ್ ಗಿರಿಯ ಪೂರ್ವಕ್ಕಿರುವ ಈ ಸ್ಥಳದಲ್ಲಿ ಪ್ರಸನ್ನಬಲ್ಲೇಶ್ವರ ದೆವಾಲಯವಿದೆ. ಜೈಮಿನಿ ಭಾರತದ ಕರ್ತೃ ಲಕ್ಷ್ಮೀಶನ ಊರು ದೇವನೂರಿನಲ್ಲಿ ಲಕ್ಷ್ಮೀಕಾಂತ ಹಾಗೂ ಸಿದ್ದೇಶ್ವರ ದೇವಾಲಯಗಳಿವೆ.

ಇಷ್ಟೆಲ್ಲಿ ಆಕರ್ಷಣೆಯಿಂದ ಕೂಡಿದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಾನಪದ ಕಲೆಯ ದರ್ಶನವನ್ನೂ ಜಾತ್ರೆ, ಹಬ್ಬ ರಥಯಾತ್ರೆಗಳಲ್ಲಿ ಕಾಣಬಹುದು.

❀ ❀ ❀

# Programme in January & February 1991

### Jan, 4, 5 and 6, 1991
### Mysore Association Golden Jubilee Education Endowment Lectures

*Speaker:*

**Prof. G. T. Narayan Rao**

*Retired Editor,*
*Kannada 'Vishwakosha',*
*Dept. of Science, University of Mysore*

**Dr. S. D. Karanik**

*Pro-Vice-Chancellor,*
*University of Bombay*

will Inagurate the lectures and Release the Book

**"Stray Musings"**

by Shri A. S. Nagaraj
*(Paramahamsapriya)*

*LECTURES:*

Friday 4-1-1991 at 7 p.m.
**'Development of Universe-1'**

Saturday 5-1-1991 at 7 p.m.
**'Development of Universe-2'**

Sunday 6-1-1991 at 11 a.m.
**'Scientific Outlook'**

*Venue* : Mysore Association Hall.

### Jan. 12, 1991
### Smt. Sudha Acharya

will Speak

on

'Indian & Indian Organisations in U.S.A.'

*Time* : 7-30 p.m.

*Venue* : Mysore Association Hall.

### Jan. 26, 1991
### Republic Day Celebration

10 a.m. Flag Hoisting

7 p.m. Drama : Kailasam's

**"Gandaskatri"**

*Directed by* : Y. V. Gundurao

8-30 p.m. Dinner

### Jan. 27, 1991
### Talents Day for Children at 6 p.m.

### February 3, 1991

**Annual Sports - Field Events**

From 10-30 a.m. at Association Play Ground

*For details contact :*
**Mysore Association Office.**

*Nesaru Wishes all Readers a Happy and Prosperous New Year.*

## ಪಂ. ಹೊಸಕೆರೆ ನಾಗಪ್ಪ ಶಾಸ್ತ್ರಿ -
# ಮುಂಬಯಿ ಮೊದಲ ಕನ್ನಡ ಪ್ರಾಧ್ಯಾಪಕ

ನವೆಂಬರ್20, 1990ರಂದು ಭಾರತೀಯ ವಿದ್ಯಾಭವನ, ಮುಂಬಯಿಯಲ್ಲಿ ಧರ್ಮಗುರು ದಲೈಲಾಮಾರವರು "ಶೀಮದ್ ಬುದ್ಧ ಭಾಗವತಂ" ಎಂಬ ಸಂಸ್ಕೃತ ಗ್ರಂಥವನ್ನು ಬಿಡುಗಡೆ ಮಾಡಿದರು. ಬುದ್ಧ ಪರಮೇಶ್ವರನ ಒಂಬತ್ತನೆಯ ಅವತಾರವೆಂದು ನಾವು ಪರಿಗಣಿಸಿದ್ದರೂ ಕೂಡ, ಅವನನ್ನು ಕುರಿತ ಮೊಟ್ಟ ಮೊದಲನೆಯ ಭಾಗವತ ಪುರಾಣ ಸಂಸ್ಕೃತದಲ್ಲಿ ನಮಗೆ ಇದುವರೆಗೂ ಲಭ್ಯವಿರಲಿಲ್ಲ. ದಲೈಲಾಮಾರವರು, ಗೌತಮ ಮುನಿಯ ಉಪದೇಶ ಅಂದಿಗಿಂತ ಇಂದಿಗೆ ಹೆಚ್ಚು ಸಾಂಗತ್ಯವಾಗಿದೆ ಎಂದರಲ್ಲದೆ, ಭಾರತದಲ್ಲಿ ಮೊದಲಾದ ಈ ಉಪದೇಶದ ಸಾರ, ಈಗ ಭಾರತದಲ್ಲಿಯೇ ಮರೆಯಾಗುತ್ತಿದೆ ಎಂದು ಕಳ ಕಳಿಸಿದರು. ಸಿದ್ಧಾರ್ಥ ಮರೆಯಾದ 2500 ವರ್ಷಗಳ ಮೇಲೆ ಅವನ ಭಾಗವತವನ್ನು ಬರೆದ ಈ ಮಹನೀಯ ಕನ್ನಡಿಗ ಎನ್ನುವುದು ನಮಗೆ ಹೆಮ್ಮೆ.

ಪಂಡಿತ ನಾಗಪ್ಪ ಶಾಸ್ತ್ರಿಯವರು, ಅಂದಿನ ಕಡೂರು, ಇಂದಿನ ಚಿಕ್ಕಮಗಳೂರು ಜಿಲ್ಲೆಯ ಹೊಸಕೆರೆಯಲ್ಲಿ 1877ರಲ್ಲಿ ಹುಟ್ಟಿದರು. ತಂದೆ ಸೂರ್ಯನಾರಾಯಣ, ತಾಯಿ ಅಮ್ಮಣ್ಣಿ, ಸ್ಮಾರ್ತ ಹೊಯ್ಸಳ ಕರ್ನಾಟಕರು, ಶೃಂಗೇರಿ ಮಠದ ಅನುಯಾಯಿಗಳು. ಕಟ್ಟುನಿಟ್ಟಿನ ಸಂಪ್ರದಾಯಸ್ಥ ಮನೆತನವಾದುದರಿಂದ ಅವರ ಸ್ವಭಾವ ಕೂಡ ಅಂತೆಯೇ ರೂಪುಗೊಂಡಿತು. ಚಿಕ್ಕಪ್ಪ ಸುಬ್ರಹ್ಮಣ್ಯರಾಯರು ಶೃಂಗೇರಿಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಹುಡುಗನನ್ನು ಶೃಂಗೇರಿಯಲ್ಲಿ ಸಂಸ್ಕೃತಾಭ್ಯಾಸಕ್ಕೆ ದಾಖಲು ಮಾಡಿದರು. ಹಿಂದಿನ ಆಚಾರ್ಯರಾದ ಶ್ರೀ ಚಂದ್ರಶೇಖರ ಭಾರತೀಯರು ಇವರ ಸಹಪಾಠಿಗಳು. ಈ ಎಳೆಯ ಗೆಳೆತನ ಆಚಾರ್ಯರು ಇರುವವರೆಗೂ ಸಾಗಿತು. ಸಂಸ್ಕೃತಾಭ್ಯಾಸ ಮಾತ್ರವಲ್ಲದೆ ಇಂಗ್ಲಿಷ್ ವಿದ್ಯಾಭ್ಯಾಸವೂ ನಡೆಯಿತು. 1902ರಲ್ಲಿ ಮದರಾಸಿನಲ್ಲಿ ಪ್ಲೀಡರ್ ಪರೀಕ್ಷೆಯನ್ನು ಮಾಡಿ ಮೈಸೂರಿಗೆ ಬಂದರು.

ಅಂದಿನ ಮೈಸೂರು ಸರ್ಕಾರದಡಿ ಹೆಡ್ ಮುನ್ಷಿಯಾಗೆ ನೇಮಕಗೊಂಡರು. ಇವರ ಸಂಸ್ಕೃತ ಪಾಂಡಿತ್ಯದ ಹೆಸರು ಹರಡಿ, ಮಹಾಸ್ವಾಮಿಯವರ ವರೆಗೂ ಮುಟ್ಟಿತು. ಅವರು ರಾಜಕುಮಾರಿಯರಿಗೆ ಅರಮನೆಯಲ್ಲಿ ಸಂಸ್ಕೃತಾಭ್ಯಾಸವನ್ನು ಮಾಡಿಸಲು ಶಾಸ್ತ್ರಿಯವರನ್ನು ಆಹ್ವಾನಿಸಿದರು. ಅವರ ಅಂದಿನ ವೇತನ ಮೂರು ಸವರನ್ನುಗಳು.

ಕೆಲವು ವರ್ಷಗಳ ನಂತರ ಸೀನಿಯರ್ ಆಗಿದ್ದರೂ ಕೂಡ ಮುನ್ಸಿಫ್ ಪದವಿ ಇವರಿಗೆ ದೊರೆಯದೇ ಇದ್ದುದರಿಂದ ಸರ್ಕಾರಿ ನೌಕರಿ, ಅರಮನೆ ಚಾಕರಿ ಎರಡೂ ಬಿಟ್ಟು, ಶಾಸ್ತ್ರಿಯವರು ನರಸಿಂಹರಾಜಪುರಕ್ಕೆ ಬಂದು ನೆಲೆಸಿದರು. 1910ರಿಂದ 1929ರ ವರೆಗೆ ವಕೀಲರಾಗಿ ಕೆಲಸಮಾಡಿದರು. ಸ್ವಾತಂತ್ರ್ಯ ಚಳುವಳಿಯ ಬಿಸಿ ಹೆಚ್ಚಾಗಿದ್ದ ಕಾಲ, ಶಾಸ್ತ್ರಿಗಳು ತಮ್ಮ 52ನೆಯ ವಯಸ್ಸಿನಲ್ಲಿ ತಮ್ಮ ವೃತ್ತಿಯನ್ನು ಬಿಟ್ಟು ಮುಂಬಯಿಗೆ ನಡೆದರು.

*(7ನೇ ಪುಟದಲ್ಲಿ)*

FOR ALL YOUR DOMESTIC AND INTERNATIONAL TRAVEL ARRANGEMENTS
CONTACT
AUGUST TRAVEL SERVICE
Agents For
इंडियन एयरलाइन्स
Indian Airlines
वायुदूत
Vayudoot
REGD. OFFICE :
3/15 ASHIANA SECTOR - 17
VASHI - NEW BOMBAY
0215/682558-591
GRAMS : AUGTRASERV
ALSO AT :
2/16 KABBUR HOUSE
SION(E) BOMBAY 400 022.
4077750-2984/4093573

# ಪ್ರೀತಿ

- ಭಾರತಿ ಪ್ರಸಾದ್

'ಪ್ರೀತಿ' ಎನ್ನುವ ಎರಡಕ್ಷರದ ಪದದಲ್ಲಿ ಎಷ್ಟು ತೂಕವಿದೆ, ಎಷ್ಟು ಬೆಲೆ ಇದೆ ಎಂದರೆ - ದಾಸರು "ಕೃಷ್ಣ ನಾಮವೆಂಬ ಕಲ್ಲು ಸಕ್ಕರೆಯ ಸವಿ ಬಲ್ಲವರೇ ಬಲ್ಲರು" ಎಂಬಂತೆ, ಪ್ರೀತಿಯ ಬೆಲೆ ಮತ್ತು ಅದರ ರುಚಿಯನ್ನು ಕೇವಲ ಶಬ್ದಗಳಿಂದ ಹೇಳಲುಸಾಧ್ಯವಿಲ್ಲ. ಅನುಭವಿಸಬೇಕು. ಅದು ಹೃದಯದ ಭಾಷೆ. 'ಪ್ರೀತಿ' ಎಂದ ಕೂಡಲೇ ಹೆಚ್ಚು ಜನರ ಮನಸ್ಸಿಗೆ ಬರುವ ಭಾವನೆ, ಒಂದು ಹುಡುಗ, ಹುಡುಗಿಯನ್ನೊ ಅಥವಾ ಹುಡುಗಿ, ಹುಡುಗನನ್ನು ಪ್ರೀತಿಸುವುದು ಎಂದು. ಆದರೆ ಆ 'ಪ್ರೀತಿ'ಯ ಬಹುಮುಖಗಳನ್ನು ನಾವು ನಿತ್ಯದ ಜೀವನದಲ್ಲಿ ಹೇಗೆ ಕಾಣುತ್ತೇವೆಂಬುದನ್ನು ನೋಡೋಣ.

ನಾವು ಈ ಭೂಮಿಯ ಮೇಲೆ ಜನ್ಮ ತಾಳಿದಿಂದಿನಿಂದ ಪ್ರೀತಿಯ ಮಹತ್ತು ಶುರುವಾಗುತ್ತದೆ. ನಮ್ಮನ್ನು ಹೆತ್ತ ತಾಯಿ ಪ್ರೀತಿ ಮೊದಲು, ನಂತರ ತಂದೆ, ಅಕ್ಕ, ತಮ್ಮ, ಅಣ್ಣ, ತಂಗಿ, ಬಂಧು, ಭಾಂಧವರು ಹೀಗೆ ಅದಕ್ಕೆ ಸೀಮೆಯೇ ಇಲ್ಲದೆ ಬೆಳೆದುಕೊಂಡು ಹೋಗುತ್ತಿರುತ್ತೆ. ಅದನ್ನು ಬೆಳೆಸಿಕೊಂಡು ಹೋಗುವ ರೀತಿ ನಮ್ಮ ಕೈಯಲ್ಲಿದೆ. ತಂದೆ-ತಾಯಿಗಳಿಗೆ ಮಕ್ಕಳ ಮೇಲೆ ಅತಿಯಾದ ಪ್ರೀತಿ ಇರುತ್ತೆ, ಆದರೆ ಅದು ತನ್ನ ಎಲ್ಲೆ ಮೀರಿ ಹೋದರೆ ಕೆಲವು ಸಲ ಕೇಡಾಗಬಹುದು. ಮಕ್ಕಳಿಗೂ ತಂದೆ ತಾಯಿ ಮೇಲೆ ಬಹಳಷ್ಟು ಪ್ರೀತಿ ಇರುತ್ತದೆ.

ಕೆಲವು ಮನೆಗಳಲ್ಲಿ ಆಳುಗಳ ಮೇಲೆ ಮಕ್ಕಳ ಜವಾಬ್ದಾರಿ ಬಿಟ್ಟು, ತಂದೆ ತಾಯಿಗಳು ಹೊರಗೆ ಹೋಗುತ್ತಿರುತ್ತಾರೆ, ಆಗ ಅವಕ್ಕೆ ತಂದೆ-ತಾಯಿ ಯ ಪ್ರೀತಿ ಸಿಗುವುದು ಕಷ್ಟವಾಗುತ್ತೆ. ಕೆಲವು ಮಕ್ಕಳಿಗಂತೂ ಹುಟ್ಟಿದಾರಭ್ಯ ಅಪ್ಪ-ಅಮ್ಮನ ಪ್ರೀತಿ ಸಿಗದೆ, ಅನಥಾಶ್ರಮದಲ್ಲಿ ಬೆಳೆಯಬೇಕಾಗುತ್ತೆ. ಅಲ್ಲಿ ಸಹ ಯಾರದ್ದಾದರೂ ಪ್ರೀತಿ ಸಿಕ್ಕೇ ಸಿಗುತ್ತೆ. ಆ ಪ್ರೀತಿ ಹಂಚಿ ಹೋಗುತ್ತೆ. ಕೆಲವು ಸಲ ಅಂತಹ ಮಕ್ಕಳಿಗೆ, ನಮ್ಮದೇ ಆದ ಒಂದು ಮನೆ ಇದ್ದು ಅಮ್ಮ-ಅಪ್ಪ ಇದ್ದರೆ ಎಷ್ಟು ಚೆನ್ನಾಗಿರುತ್ತೆ ಎಂದು ಅನ್ನಿಸಬಹುದು. ಮಕ್ಕಳಿಲ್ಲದ ಕೆಲವರು ಇಂಥ ಮಕ್ಕಳನ್ನು ದತ್ತು ತೆಗೆದುಕೊಂಡು ಆ ಮಗುವಿಗೆ ಪ್ರೀತಿಯನ್ನು ಕೊಟ್ಟರೆ, ಇಬ್ಬರಿಗೂ ಆಗ ಆಗುವ ಆನಂದ ಅಷ್ಟಿಷ್ಟಲ್ಲ.

ಮಕ್ಕಳು ಬೆಳೆದು ದೊಡ್ಡವರಾಗಿ, ಮದುವೆಯಾದ ಮೇಲೆ, ಮನೆಗೆ ಬರುವ ಸೊಸೆ ಅಥವಾ ಅಳಿಯನಿಗೂ ನಮ್ಮ ಪ್ರೀತಿಯ ಒಂದು ಪಾಲನ್ನು ಹಂಚಬೇಕಾಗುತ್ತದೆ. ಪ್ರೀತಿಯು ಕಾಡಿ, ಬೇಡಿ ಪಡೆಯುವ ವಸ್ತುವಲ್ಲ ಹೃದಯದ ಆಳದಿಂದ ತನಗೆ ತಾನಾಗಿ ಉಕ್ಕಿ ಬರುವಂತದ್ದು. ಸೊಸೆ ತನ್ನ ಮನೆಯವರನ್ನು, ಬಂಧುಗಳನ್ನು ಬಿಟ್ಟು ನೂರಾರು-ಸಾವಿರಾರು ಮೈಲಿಗಳ ದೂರ ಬಂದು ಗಂಡನ ಮನೆ ಸೇರಿದಾಗ, ಅವಳಿಗೆ ಅಲ್ಲಿ ಪ್ರೀತಿ ಸಿಕ್ಕಿದರೆ ತನ್ನವರನ್ನು ಅಗಲಿದ ನೋವು ಕಾಣುವುದಿಲ್ಲ. ಅವಳೂ ಸಹ ಈ ಮನೆಯವರನ್ನು ತನ್ನವರಂತೇ ಪ್ರೀತಿಯಿಂದ ಕಂಡರೆ ಆಗ ಯಾವ ಮನಸ್ತಾಪವೂ ಬರುವುದಿಲ್ಲ. ಇಲ್ಲದಿದ್ದರೆ ಮನೆ, ಮನಸ್ಸು ಎರಡೂ ವಿಭಾಗವಾಗುವುದು. ಇದೇ ಮಾತುಗಳು ಅಳಿಯನಿಗೂ ಅನ್ವಯಿಸುತ್ತದೆ. ಮನೆಯ ಹೊರಗೂ ಸಹ ಪ್ರೀತಿ ಬೀಜ ಬಿತ್ತಬೇಕು. ನಾವು ಶಾಲೆಗೆ ಹೋದಾಗ ಅಲ್ಲಿ ಗುರು-ಶಿಷ್ಯರ ಮಧ್ಯೆ ಒಂದು ರೀತಿಯ ಪ್ರೀತಿಯನ್ನು ಕಾಣಬಹುದು. ಗುರುಗಳು ಸಾವಿರಾರು ಮಕ್ಕಳಿಗೆ ಪಾಠ ಹೇಳಿಕೊಟ್ಟು, ಜೀವನದಲ್ಲಿ ನೆಲೆಯಾಗಿ ನೆಲೆಸಲು ಒಂದು ತಳಹದಿಯನ್ನು ಹಾಕಿ ಕೊಡುತ್ತಾರೆ. ಶಿಷ್ಯನಿಗೂ ಸಹ ತನ್ನ ಗುರುಗಳ ಮೇಲೆ ಒಂದು ರೀತಿಯ ಪ್ರೀತಿ ಬೆಳೆದು ಬರುತ್ತೆ. ಕೊನೆಗೆ ಶಾಲೆಯನ್ನು ಬಿಡುವಾಗ, ತನ್ನನ್ನೂ ಅರಿಯದ ಒಂದು ನೋವುಂಟಾಗುತ್ತೆ.

'ಪ್ರೀತಿ' ಒಂದು ಆತ್ಮೀಯ ಭಾವನೆ. ಅದು ಎರಡು ಹೃದಯಗಳನ್ನು ಒಂದಾಗಿಸುತ್ತೆ. ನಾವು ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರೂ, ಪ್ರೀತಿ ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಹೊಂದಿರುತ್ತೆ ಮತ್ತು ಅದರ ಪಾತ್ರವು ಬಹಳ ಮುಖ್ಯವಾದದ್ದು. ಆಫೀಸಿನಲ್ಲಿ ಮೇಲಾಧಿಕಾರಿಗಳು, ತಮ್ಮ ಕೆಳಗಿನವರನ್ನು ಪ್ರೀತಿಯಿಂದ ನಡೆಸಿಕೊಂಡರೆ, ಕೆಲಸಮಾಡುವವರಿಗೆ ಒಂದು ಬಗೆಯ ಉತ್ಸಾಹ ವಿದ್ದು, ಹೆಚ್ಚು ಶ್ರಮ ವಹಿಸಿ ಮಾಡುತ್ತಾರೆ. ಮನೆ ಕೆಲಸದವರನ್ನೇ ತೆಗೆದು ಕೊಳ್ಳಿ, ಅವರನ್ನು ನಾವು ಪ್ರೀತಿಯಿಂದ ಮಾತನಾಡಿಸಿ ಕೆಲಸ ಹೇಳಿದರೆ. ಅವರು ಮನಸ್ಸಿಟ್ಟು ಮಾಡುತ್ತಾರೆ. ಇವರು ಕೇವಲ ಹಣಕ್ಕಾಗಿ ಬಂದವರು ಎಂದು ಅವರನ್ನು ತುಚ್ಛವಾಗಿ ಕಂಡರೆ, ಅದರಿಂದ ಯಾವುದನ್ನು ನಾವು ಸಾಧಿಸುವುದಿಲ್ಲ. ಹಾಗೆಂದು, ಅವರು ತಪ್ಪು ಮಾಡಿದರೆ ನಾವು ಸುಮ್ಮನಿರಬಾರದು, ತಿದ್ದಬೇಕು. ವೈದ್ಯನಾದವನೂ ಸಹ ತನ್ನ ರೋಗಿಯನ್ನು ಪ್ರೀತಿಯಿಂದ ಮಾತನಾಡಿಸಿ ಔಷಧಿ ಕೊಟ್ಟರೆ, ನೋವು ಕಡಿಮೆಯಾಗಿ, ಕಾಯಿಲೆ ಬೇಗ ಗುಣವಾಗುವ ಸಂಭವವಿರುತ್ತೆ. ಏಕೆಂದರೆ ನಮ್ಮ ಮನಸ್ಸೇ ಕಾಯಿಲೆಗೆ ದೊಡ್ಡ ಶತ್ರು.

ಪ್ರೀತಿಯು ಬರೀ ಮನುಷ್ಯ ಜಾತಿಗೆ ಸಂಬಂಧ ಪಟ್ಟಿದ್ದಲ್ಲ. ಪ್ರಾಣಿ, ಪಕ್ಷಿ, ಗಿಡಗಳಿಗೂ ಸಹ ನಮ್ಮ ಪ್ರೀತಿಯನ್ನು ಮೀಸಲಾಗಿಡಬೇಕು. ನಾವು ಮನೆಗಳಲ್ಲಿ ನಾಯಿ, ಬೆಕ್ಕು, ಎಮ್ಮೆ, ಹಸು ಬೆಳೆಸುತ್ತೇವೆ. ಅವುಗಳಿಗೂ ನಮ್ಮ ಪ್ರೀತಿಯ ಅಗತ್ಯವಿರುತ್ತೆ. ಸಾಕಿದ ಪ್ರಾಣಿ, ತನ್ನ ಯಜಮಾನನು ಪ್ರೀತಿಯಿಂದ ಅದಕ್ಕೆ ತಿನಸನ್ನು ಕೊಟ್ಟು, ಬೆನ್ನು ನೇವರಿಸಿದರೆ, ಅದು ತನ್ನದೇ ಆದ ರೀತಿಯಲ್ಲಿ ಪ್ರೀತಿಯನ್ನು ತೋರ್ಪಡಿಸುತ್ತೆ. ಒಂದೊಂದು ಸಲ ನಾವು ಅವುಗಳನ್ನು ಸರಿಯಾಗಿ ಗಮನಿಸದಿದ್ದರೆ, ಆ ಮೂಕ ಪ್ರಾಣಿಯು ಮನಸ್ಸಿನ ನೋವಿನಿಂದ ಒಂದು ರೀತಿ ಕೂಗುತ್ತದೆ. ಆದ್ದರಿಂದ ಪ್ರೀತಿ ಎನ್ನವುದು ಒಂದು ಚೌಕಟ್ಟಿನಲ್ಲಿಡುವ ವಸ್ತುವಲ್ಲ. ಕೆಲವರಿಗೆ ಗಿಡ, ಮರಗಳೆಂದರೆ ಅತಿಯಾದ ಪ್ರೀತಿ. ಮನೆ ದೊಡ್ಡದಾಗಿರಲಿ, ಸಣ್ಣದಾಗಿರಲಿ, ಒಂದು ಗಿಡವನ್ನಾದರೂ ಬೆಳೆಸಲು ಅವರಿಗೆ ಆಸೆ. ಬೀಜವನ್ನು ಹಾಕಿ, ಅದು ಸಸಿಯಾಗಿ, ಗಿಡವಾಗಿ, ಹೂ, ಕಾಯಿ ಬಿಟ್ಟಾಗ ಆಗುವ ಸಂತೋಷ ಹೇಳತೀರದು. ಆ ಗಿಡಕ್ಕೆ ಏನಾದರೂ ಸ್ವಲ್ಪ ಪೆಟ್ಟಾದರೂ, ಇವರಿಗೆ ಪೆಟ್ಟಾದಷ್ಟು ಒದ್ದಾಡುತ್ತಾರೆ. ಆ ಗಿಡದ ಮೇಲಿನ ಪ್ರೀತಿ ಅವರನ್ನು ಹಾಗೇ ಮಾಡುತ್ತೆ.

ಆಧ್ಯಾತ್ಮಿಕವಾಗಿ ತೆಗೆದುಕೊಂಡರೆ ಭಗವಂತನ ಭಕ್ತನ ಪ್ರೀತಿ. ಭಕ್ತನ ಪ್ರೀತಿ ಭಗವಂತನ ಮೇಲೆ ಹೆಚ್ಚಾದರೆ ಅದಕ್ಕೆ ಭಕ್ತಿ ಎನ್ನುತ್ತಾರೆ. ಭಗವಂತನಿಗೆ ಎಲ್ಲರ ಮೇಲೂ ಪ್ರೀತಿ ಇರುತ್ತೆ. ಭಗವಂತನು ಭಕ್ತರಿಗೆ ಹೇಳುವುದೆಂದರೆ "ನೀನು ನನ್ನನ್ನು ಪ್ರೀತಿಯಿಂದ ಪೂಜಿಸಿದರೆ, ಅದಕ್ಕೆ ಸಾವಿರ ಪಾಲಷ್ಟು ಪ್ರೀತಿಯನ್ನು ನಾನು ಯಾವಾಗಲೂ ನಿನಗೆ ಕೊಡುತ್ತೇನೆ"

ಪ್ರೀತಿ ಎನ್ನುವ ಈ ಸಣ್ಣ ಶಬ್ದದಿಂದ ಮನೆ, ಮನಸ್ಸು ಎರಡೂ ಒಂದಾಗಲೂ ಬಹುದು, ಒಡೆಯಲೂಬಹುದು. ಕೆಲವು ಸಲ ಹಣ, ಆಸ್ತಿ, ಅಂತಸ್ತು ಇವುಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು, ಪ್ರೀತಿಯೆಂಬ ಅಮೂಲ್ಯವಾದ ವಸ್ತುವನ್ನು ಕಳೆದುಕೊಳ್ಳುತ್ತಾರೆ. ಮನೆಗೆ ಬಂದವರಿಗೆ ಪ್ರೀತಿಯಿಂದ ಒಂದು ಲೋಟ ನೀರು ಕೊಟ್ಟರೂ ಸಾಕು. ಕೆಲವರು ಪ್ರೀತಿಯ ಬೆಲೆ ಏನು ಎಂಬುದನ್ನು ಅರ್ಥ ಮಾಡಿಕೊಳ್ಳದೆ, ಮನಸ್ಸಿಗೆ ಬಂದ ಹಾಗೇ ಮಾತಾಡಿ, ನೋಯಿಸಿದ ಮೇಲೆ ತಾನು ಮಾಡಿದ್ದು ತಪ್ಪು ಎಂಬ ಅರಿವು ಮೂಡುವ ಹೊತ್ತಿಗೆ ಕಾಲ ಮಿಂಚಿ ಹೋಗಿರುತ್ತೆ. ಒಡೆದ ಮನಸ್ಸನ್ನು ಸರಿ ಮಾಡುವುದು ಅಷ್ಟು ಸುಲಭವಲ್ಲ. ಇದು ಯಾರಿಗಾದರೂ ಅನ್ವಯಿಸಬಹುದು, ತಂದೆ-ತಾಯಿ, ಅಕ್ಕ-ತಮ್ಮ, ತಂಗಿ, ಅಣ್ಣ, ಗಂಡ -ಹೆಂಡತಿ, ಸ್ನೇಹಿತರು, ನೆರೆಹೊರೆಯರು.

ಕೆಲವು ಸಂದರ್ಭಗಳಲ್ಲಿ ಉಡುಗೊರೆಗಳನ್ನು ಕೊಟ್ಟು, ತೆಗೆದುಕೊಳ್ಳಬೇಕಾಗುವುದು. ತಾವು ಕೊಟ್ಟ ವಸ್ತುವಿಗೆ ಬೆಲೆ ಕಟ್ಟುವುದಿಲ್ಲ, ಇನ್ನೊಬ್ಬರು ಇವರಿಗೆ ಕೊಟ್ಟಿದಕ್ಕೆ ಬೆಲೆ ಕಟ್ಟುತ್ತಾರೆ. ಅದರಲ್ಲಿ ಕೊಟ್ಟವರ ಪ್ರೀತಿ ಎಷ್ಟಿದೆ ಎಂಬುದನ್ನು ಅರ್ಥ ಮಾಡಿ ಕೊಳ್ಳುವುದಿಲ್ಲ. ಕಾಗದ, ಪತ್ರ ವ್ಯವಹಾರದಲ್ಲಿ ಸಹ ಪ್ರೀತಿಯ ಪಾತ್ರ ದೊಡ್ಡದು. ನಿಮಗೆ ಬಹಳ ಬೇಕಾದವರಿಗೆ ಪ್ರೀತಿಯ ಒಂದೇ ಒಂದು ವಾಕ್ಯ ಬರೆದರೂ ಸಾಕು, ಅವರಿಗೆ ನಿಮ್ಮನ್ನೆ ನೋಡಿದಷ್ಟು ಸಂತೋಷವಾಗುತ್ತೆ. ಒಟ್ಟಿನಲ್ಲಿ 'ಪ್ರೀತಿ' ದುಡ್ಡು ಕೊಟ್ಟು ಕೊಳ್ಳುವ ವಸ್ತುವಲ್ಲ. ಅದು ತಾನಾಗೇ ಹೃದಯದ ಆಳದಿಂದ ಉಕ್ಕಿ ಬರುವಂತಹುದು. ಅದನ್ನು ಪಡೆಯುವುದು ಕಷ್ಟ, ಆದರೆ ಕಳೆದುಕೊಳ್ಳವುದು ಬಹಳ ಸುಲಭ. ಕಳೆದುಕೊಂಡಾಗ ಆಗುವ ನೋವು ಅನುಭವಿಸಿದವರಿಗೇ ಗೊತ್ತು.

Health

# DISORDERS OF MUSCULO-SKELETAL SYSTEM

*- Prasad*

The remarkable efficiency with which the human body moves isdue to its Musculo-Skeletal system which consists of bones, muscles and a complex assortment of other connective tissues such as ligaments tendons and cartilages. Though this system is rugged, these structures often suffer damages. Violent movements can strain or tear the ligamements, tendons or muscles leading to inflammation, swelling and pain. The joints which bear the weight of the body such as hips, knees,ankles, and vertibrae are prone to wear and tear. Although the human body has a process of rebuilding the wear and tear, in many instances, the wear and tear is faster than the rebuilding process leading to dysfunctioning of the joints.

It is said that nearly 10% of the cases treated by a general practioner concern the treatment of these kinds of disorders. Let us briefly look at the various disorders and how they are treated.

**Arthritis :**

Swelling of the joints - is a medical term used to describe these disorders in general. Rheumatoid arthritis is a systemic disease charcterised with malaise, fever, loss of weight, numbness of hand & feet and morning stiffness. The onset is generally insedious and the disease progresses from the joints of hands & feet to other joints gradually. Often this disease is precipitated in conditions of stress, infection or injury. Nearly 3% of the population suffer from this disease, women being more prone to this than men.

**Rheumatic fever :**

Is a condition charecterised by flitting joint pain and high fever. Swelling of the finger joints is rare. Usally patient gets good relief with Aspirin.

**Spondylitis :**

Inflammation of the connective tissues of the vertibrae, charecterised by chronic back ache which progressively limits the movements. May be familial. Intermittant bouts of back ache radiating down the thighs are common.

**Osteoarthritis :**

A degenerative disorder charecterised by swelling of the bones at the joint margins and the degeneration of cartilage. Usually effects the weight bearing joints especially the knee. Injury, Obesity, bad posture and occupational hazards can cause this disease. Rest brings about relief of pain.

**Gouty arthritis:**

Familial in character, effects mostly males. In over 50% of the cases, the on set is acute and affects the big toe.

Apart from these, while the entire joint is not affected, particular tissue could be affected leading to inflammation and pain. e.g. : Bursitis -inflammation of Bursa a pouch like space between muscles which helps movements. Fibrositis - inflammation of the fibrous tissue.

In treating these disorders, while it is essential to treat the underlying cause, in practice, providing relief from pain and restoring normalcy of movements of the effected joints become important. The treatment can be broadly divided into three parts;

- Rest or joint immobilisation
- Drug therapy
- Readjustment/Rehablilitation.

In acute conditions, complete bed rest produces dramatic relief. If the joint involved is only one or two, then immobilization with splint will be effective.

Many drugs are used to reduce inflammation and pain. While a simple pain reliver like asirin is used as the first line of treatment., where it not bring about a disirable responce, other drugs such as Pyrazolones, Indomethacin, Ibruprofen, Mafenamic acid etc may be prescribed. These drugs are known as Non-Steroidal Anti-inflammatory Drugs (NSAID). They donot alter the progress of the disease but produce the required relief from pain and inflammation, bringing about a greater comfort to the patient. Most of the these drugs cause gastric irritation.

In severe cases where the progress of the disease is very rapid, local injection of cortico-steroids are employed. This is usful in conditions where isolated joints are effected. The drug is injected to the joint involved. Often this treatment produces dramatic and lasting improvement.

Readjustment invloves, reducing the body weight so as to reduce the load on weight bearing joints, physio-therapy and exercises to keep up the mobility of joints that have been affected and strengthening of the muscles which have become weakened by disuse. With care and deligence one can rehabilitate one self with in the extant to which one can stretch the normal function of the effected part of the Skeleto-Muscular System.

❀ ❀ ❀

## ಬೆಳ್ಳಿ ಮಹೋತ್ಸವ ದತ್ತ ನಿಸ್ಪೃಹ ಕ್ರೀಯಾ ಶೀಲತೆಯ ದಿಟ್ಟ ಹೆಜ್ಜೆ :

ದೊಂಬಿವಿಲಿಯಲ್ಲಿರುವ ಕರ್ನಾಟಕ ಸಂಘವು ಕಳೆದ ೨೨ ವರುಷಗಳಿಂದ ಮಾತೃ ಭಾಷಾ ಹಾಗೂ ಆಂಗ್ಲ ಭಾಷಾ ಮಾಧ್ಯಮದಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಾಲೆಯನ್ನು ನಡೆಯಿಸುತ್ತಿರುವದರ ಜತೆಗೆ ವಾಚನಾಲಯ, ಲಲಿತ ಕಲಾ ವಿಭಾಗಗಳನ್ನು ತೆರೆದು ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವೈಶಿಷ್ಟ್ಯ ಪೂರ್ಣ ಕಾರ್ಯಕ್ರಮಗಳನ್ನು ಜರಗಿಸುತ್ತಿರುವದರ ಮೂಲಕ ಹೊರನಾಡ (ಮುಂಬೈ - ಉಪನಗರ) ಕೆಲವೇ ಕ್ರಿಯಾಶೀಲ ಸಂಘ ಸಂಸ್ಥೆಗಳಲ್ಲೊಂದಾಗಿ ಕನ್ನಡ ಸೇವೆಯಲ್ಲಿ ತನ್ನ ಹೆಸರು ಸಾರ್ಥಕ ಹೊಂದಿದ್ದು ಸರ್ವ ವಿಧಿತ.

ಬೆಳ್ಳಿ ಮಹೋತ್ಸವ ಆಚರಣ ಪೂರ್ವದಲ್ಲಿ ಡೊಂಬಿವಲಿಯಲ್ಲಿ, ಸಭಾಗೃಹ, ಕ್ರೀಡಾಂಗಣ ಯೋಜನೆ ಹಮ್ಮಿಕೊಂಡಿದ್ದು, ಬೆಳ್ಳಿ ಹಬ್ಬ ಹಾಗೂ ಇತರ ಯೋಜನೆಗಳು ಯಶಸ್ವಿ ಕಾರ್ಯ ರೂಪವಾಗುವಲ್ಲಿ ನಗರ, ಉಪನಗರ, ಒಳ ನಾಡು-ಹೊರನಾಡು. ಸಂಘ ಸಂಸ್ಥೆ. ಹಾಗೂ ಜನತೆಗಳ ಮೌಲಿಕ ಸಹಾಯ, ಸಹಕಾರ, ಸೂಚನೆಗಳನ್ನು ಈ ಸಂಸ್ಥೆ ಬಯಸುವದೆಂದು. ಗೌರವ ಕಾರ್ಯದರ್ಶಿ, ಸೌಹಾರ್ದತೆಯ ಸ್ನೇಹ ಬಯಸಿ ವಿನೀತರಾಗಿ ವಿನಂತಿಕೊಳ್ಳುತ್ತಿದ್ದಾರೆ.

## ವಚನ ಸಾಹಿತ್ಯದ ಅನುವಾದ ಅಗತ್ಯ :

ಕರ್ನಾಟಕದಲ್ಲಿ ೧೨ನೆಯ ಶತಮಾನದಲ್ಲಿ ಬಸವಣ್ಣನವರ ಬಹುಮುಖ ಮುಂದಾಳ್ತನದಲ್ಲಿ ನಡೆದ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿಯ ದಾಖಲೆಗಳಂತೆ ಉಳಿದುಕೊಂಡು ಬಂದಿರುವ ವಚನಗಳು ಸಾರ್ವಜನಿಕ ಮೌಲ್ಯಗಳೊನ್ನಳ 'ಗೊಂಡಿದ್ದು ವಿಶ್ವದ ಸಮಸ್ತ ಜನಕೋಟಿಗೆ ದಾರಿದೀಪಗಳಾಗಿ ನಿಲ್ಲುವಂತಹದಾಗಿದೆ ಕನ್ನಡ ನಾಡಿನಲ್ಲಿ ಸಲ್ಲುವ ಈ ವಚನಗಳು ಯಾವ ನಾಡಿನಲ್ಲೂ ಸಲ್ಲಬಲ್ಲವಾಗಿವೆ. ಅಂತೆಯೇ ಕನ್ನಡದ ವಚನ ಸಾಹಿತ್ಯ ಕನ್ನಡೇತರ ಭಾಷೆಗಳಲ್ಲೂ ಅನುವಾದಗೊಳ್ಳುವುದು ಅಗತ್ಯವಾಗಿದೆ ಎಂದು ಡಿ.೮ರಂದು ಮುಂಬಯಿ ಕರ್ನಾಟಕ ಸಂಘ ಮತ್ತು ಶ್ರೀ ಬಸವೇಶ್ವರ ತತ್ವಜ್ಞಾನ ಮತ್ತು ಸಾಂಸ್ಕೃತಿಕ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಏರ್ಪಟ್ಟ ಸಮಾರಂಭದಲ್ಲಿ ಶ್ರೀ ಸಿದ್ಧರಾಮಯ್ಯ ಪಾಟೀಲ ಸ್ಮಾರಕ ದತ್ತಿ ಉಪನ್ಯಾಸ ನೀಡುತ್ತ ಖ್ಯಾತ ಸಾಹಿತಿ ಡಾ| ಪ್ರಭುಶಂಕರ ಅವರು ನುಡಿದರು. ಪ್ರಾ| ಚಿದಂಬರ ದೀಕ್ಷಿತ ಅವರು ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದ ಕೊನೆಗೆ ಶ್ರೀ ಶಿವಾನಂದ ಪಾಟೀಲ, ಶ್ರೀಮತಿ ಜಯಶ್ರೀ ಪಾಟೀಲ ಮತ್ತು ಸಂಗಡಿಗರ ವಚನ ಸಂಗೀತ ಹಾಗು ನಾಟ್ಯ ಸಂಗೀತ ಕಾರ್ಯಕ್ರಮ ನಡೆಯಿತು.

# ಸುತ್ತ - ಮುತ್ತ

## ಅಂತರ್-ಕಾಲೇಜು ಪ್ರತಿಭಾ ಸ್ಪರ್ಧೆಗಳು 1990-91

### ಕನ್ನಡ ಸಂಘ

### ರಾಮ ನಿರಂಜನ ಝುನ್‌ಝುನ್‌ವಾಲಾ ಕಾಲೇಜು, ಘಾಟ್‌ಕೋಪರ್

ದಿನಾಂಕ 9-12-90ರಂದು ಕಾಲೇಜಿನ ಕನ್ನಡ ಸಂಘದ ವತಿಯಿಂದ ವಾರ್ಷಿಕ ಅಂತರ್-ಕಾಲೇಜು ಪ್ರತಿಭಾ ಸ್ಪರ್ಧೆಗಳನ್ನು ನಡೆಯಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಎಚ್. ಬಿ. ಎಲ್. ರಾವ್ ಅವರು ಆಗಮಿಸಿ ಸ್ಪರ್ಧಾಳುಗಳಿಗೆ ಶುಭಕೋರಿ, ಅಂದಿನ ಏಕಪಾತ್ರಾಭಿನಯದಲ್ಲಿ ಪ್ರಥಮ ಬಹುಮಾನವನ್ನು ಪಡೆದವರಿಗೆ ಮುಂಬಯಿ ಪದವೀಧರ ಯಕ್ಷಗಾನ ಸಮಿತಿಯು ನೂರು ರೂಪಾಯಿ ಬಹುಮಾನ ಕೊಡುವುದಾಗಿ ಘೋಷಿಸಿದರು.

ಡೊಂಬಿವಿಲಿ ಅನುಜಾ ಮಹಿಳಾ ಮಂಡಳದ ಸದಸ್ಯರ ಪುಟಾಣಿ ಮಕ್ಕಳ ಪ್ರಾರ್ಥನೆಯಿಂದ ಕಾರ್ಯಕ್ರಮವು ಪ್ರಾರಂಭವಾಯಿತು. ವಿವಿಧ ಕಾಲೇಜುಗಳಿಂದ ಬಂದಿದ್ದ ವಿದ್ಯಾರ್ಥಿಗಳು ಉತ್ಸಾಹದಿಂದ ಕನ್ನಡ ಭಾಷಣ, ಭಾವಗೀತೆ, ಸಮೂಹ ಗೀತೆ ಮತ್ತು ಏಕಪಾತ್ರಾಭಿನಯ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ನ್ಯಾಯಾಧೀಶರಾಗಿ ಬಂದಿದ್ದ ಶ್ರೀಮತಿ ಸುಮಾ ದ್ವಾರಕನಾಥ, ಶ್ರೀಮತಿ ಲಲಿತಾ ಬಾಲು, ಶ್ರೀ ವಿದ್ಯಾಧರ ಮುತಾಲಿಕ ದೇಸಾಯಿ ಮತ್ತು ಶ್ರೀ ಶಿವಪ್ರಕಾಶ್ ಎನ್. ವಿದ್ಯಾರ್ಥಿಗಳನ್ನು ಅಭಿನಂದಿಸಿ ಸೂಕ್ತ ಸಲಹೆಗಳನ್ನು ನೀಡಿದರು. ಕಾರ್ಯದರ್ಶಿ ಶ್ರೀ ಸುಬ್ಬಯ್ಯ ಪೂಂಜ ಅವರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

*- ಪ್ರೊ. ಜಿ. ಡಿ. ಜೋಶಿ*

## ಮ್ಯಾಥ್ಯೂ ಕುತ್ಯಾಡಿ ಅವರಿಗೆ ಪಿ.ಹೆಚ್.ಡಿ. ಪದವಿ

ಶ್ರೀ ಮ್ಯಾಥ್ಯೂ ಕುತ್ಯಾಡಿ ಅವರು ಡಾ| ಶ್ರೀನಿವಾಸ ಹಾವನೂರರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿ ಸಲ್ಲಿಸಿದ "ರೆವರಿಂಡ್ ಎಫ್. ಕಿಟ್ಟೆಲ್ : ಒಂದು ಅಧ್ಯಯನ" ಎಂಬ ಮಹಾ ಪ್ರಬಂಧಕ್ಕೆ ಮುಂಬಯಿ ವಿಶ್ವವಿದ್ಯಾಲಯವು ಕನ್ನಡದಲ್ಲಿ ಪಿ.ಹೆಚ್.ಡಿ. ಪದವಿಯನ್ನು ನೀಡಿದೆ. ಡಾ| ಮ್ಯಾಥೂ ಅವರು ಪ್ರಕೃತ ಹುಬ್ಬಳ್ಳಿಯಲ್ಲಿ 'ಸಂಯುಕ್ತ ಕರ್ನಾಟಕ' ಪತ್ರಿಕೆಯಉಪಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಅಧ್ಯನ-ಮುಂಬಯಿಯಲ್ಲೊಂದು ಅಪೂರ್ವ ವಿಚಾರ ಗೋಷ್ಠಿ :

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಬಾಗ ಮತ್ತು ಸ್ಥಳೀಯ ಬಾಂಬೆ ಬಂಟ್ಸ್ ಎಸೋಸಿಯೇಶನ್ ಇವುಗಳ ಸಂಯುಕ್ತ ಆಶ್ರಯದಲ್ಲಿ ಎನ್. ಎ. ಶೀನಪ್ಪ ಹೆಗ್ಡೆ ಶತಮಾನೋತ್ಸವದ ಅಂಗವಾಗಿ 'ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಅಧ್ಯಯನ' ಎಂಬೊಂದು ವಿಶಿಷ್ಟವಾದ ವಿಚಾರ ಸಂಕಿರಣ ನಡೆಯಿತು. ಡಾ. ತಾಳ್ತಜೆ ವಸಂತಕುಮಾರ ಅವರ ಅಧ್ಯಕ್ಷತೆಯಲ್ಲಿ ನಡೆದ ಗೋಷ್ಠಿಯಲ್ಲಿ ಮೂಲ್ಕಿಯ ಡಾ. ಕೆ. ಜಿ. ವಸಂತ ಮಾಧವ ಅವರು 'ಉಪಲಬ್ಧ ಐತಿಹಾಸಿಕ ಆಕರಗಳು' ಎಂಬುದರ ಬಗ್ಗೆಯೂ, ಶ್ರೀ ಎನ್. ಪಿ. ಶೆಟ್ಟಿ ಅವರು 'ಎನ್. ಎ. ಶೀನಪ್ಪ ಹೆಗ್ಡೆ - ಜೀವನ ಮತ್ತು ಸಾಧನೆ' ಎನ್ನುವುದರ ಬಗ್ಗೆಯೂ ಶ್ರೀ ಎ. ಸುಬ್ಬಣ್ಣ ರೈ ಅವರು 'ಜಾನಪದ ಆಕರಗಳು ಮತ್ತು ಇತರ ಸಾಂಸ್ಕೃತಿಕ ಇತಿಹಾಸಕಾರರು' ಎನ್ನುವ ವಿಷಯದ ಕುರಿತು ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಮುಂಬಯಿಯ ಹೆಸರಾಂತ ಕಲಾವಿದರು ಭಾಗವಹಿಸಿದ "ಶ್ರೀ ಕೃಷ್ಣ ಸಂಧಾನ" ಎಂಬ ಯಕ್ಷಗಾನ ತಾಳ ಮದ್ದಳೆಯೂ ನಡೆಯಿತು.

## ಮುಂಬಯಿ ವಿ. ವಿ. ಕನ್ನಡ ವಿಭಾಗದಲ್ಲಿ ನಾಟಕ ರಸಗ್ರಹಣ ಶಿಬಿರ

ಖ್ಯಾತ ರಂಗ ಕಲಾವಿದ ಶ್ರೀ ಸುಬ್ರಾಯಭಟ್‌ಅವರು ಇತ್ತೀಚೆಗೆ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ 'ನಾಟಕ ರಸಗ್ರಹಣ ಶಿಬಿರ'ವೊಂದನ್ನು ನಡೆಸಿದರು. ಮೂರು ದಿನಗಳ ಈ ಶಿಬಿರದಲ್ಲಿ ನಾಟಕವನ್ನು ಕುರಿತ ಸೈದ್ಧಾಂತಿಕ ವಿಚಾರಗಳು, ನಾಟಕ ಪದ್ಧತಿ, ತಂತ್ರ, ರಸಗ್ರಹಣ, ಭಾರತೀಯ ಮತ್ತು ಪಾಶ್ಚಾತ್ಯ ನಾಟಕ ತಜ್ಞರ ವಾದಗಳ ಅವಲೋಕನ ಇತ್ಯಾದಿ ವಿಷಯಗಳನ್ನು ಕುರಿತಂತೆ ಉಪನ್ಯಾಸ, ಚರ್ಚೆ, ಪ್ರಾತ್ಯಕ್ಷಿಕೆಗಳು ನಡೆದವು. ಡಾ. ಸಂಜೀವ ಶೆಟ್ಟಿಯವರು ಉದ್ಘಾಟಿಸಿದ ಈ ಶಿಬಿರದಲ್ಲಿ ವಿಭಾಗದ ವಿದ್ಯಾರ್ಥಿಗಳು ಇತರ ಆಸಕ್ತ ಕನ್ನಡಿಗರೂ ಭಾಗವಹಿಸಿದರು. ಕೊನೆಯ ದಿನ ಪ್ರೊ. ಜಿ. ವಿ. ಕುಲಕರ್ಣಿಯವರು ಸಮಾರೋಪ ಭಾಷಣ ಮಾಡಿದರು. ಶ್ರೀ ಎ. ಸುಬ್ಬಣ್ಣ ರೈ ಶಿಬಿರ ಸಂಚಾಲಕರಾಗಿದ್ದರು.

# ಕನ್ನಡ ಕಲಾಕೇಂದ್ರದ ನಾಟಕೋತ್ಸವ ಒಂದು ಬೆಳ್ಳಿ ಮೈಲುಗಲ್ಲು

ಪ್ರತಿಯೊಂದು ಸಂಸ್ಥೆಯ ಇತಿಹಾಸದಲ್ಲಿಯೂ ಕೂಡ ಅದರ ದುಡಿತದ ಗುರುತಾಗಿ ಯಾವುದಾದರೂ ಒಂದು ಕಾಯಕ್ರಮ ರುಪುಗೊಳ್ಳುತ್ತದೆ. ಕನ್ನಡ ಕಲಾಕೇಂದ್ರದ 25ನೆಯ ನಾಟಕೋತ್ಸವ ಅಂತಹ ಒಂದು ಮೈಲಿಗಲ್ಲು. ಕನ್ನಡ ರಂಗಭೂಮಿಯ ಬೆಳವಣಿಗೆಯನ್ನೇ ಪ್ರಾಧಾನ್ಯವಾಗಿ ಇಟ್ಟುಕೊಂಡು ದುಡಿದ ಕೆಲವೇ ಕೆಲವು ಸಂಸ್ಥೆಗಳಲ್ಲಿ ಕೇಂದ್ರಕ್ಕೆ ಅಗ್ರ ಸ್ಥಾನ ದೊರೆಯುತ್ತದೆ.

1954ರಲ್ಲಿ ಕೆಲವು ಉತ್ಸಾಹಿಗಳು ಬಿ.ಎಸ್.ಕೆ.ಬಿ. ಅಸೋಸಿಯೇಶನ್‌ನಲ್ಲಿ ಕೈಲಾಸಂ ರವರ "ಹೋಂರೂಲ್" ನಾಟಕವನ್ನು ತುಳು ವಿಗೆ ಅನುವಾದ ಮಾಡಿ ಪ್ರದರ್ಶಿಸಿದ ಹುರುಪು ಕೇಂದ್ರದ ಮಟ್ಟಿಗೆ ಕಾರಣವಾಯಿತು. 1955ರಲ್ಲಿ ಔಪಚಾರಿಕ ವಾಗಿ ಶ್ರೀ ವೆಂಕಟೇಶ ಮೂರ್ತಿಯವರ ನಿಲುಗೈಯಿಂದ ಹುಟ್ಟಿದ ಕೇಂದ್ರದ ಮೊದಲ ನಾಟಕ "ಹಣಹದ್ದು" ನಂತರ "ಅಳಿಯದೇವರು", "ನಂಜಿನ ನಾಲಗೆ", "ಹುಚ್ಚ", "ಕೀಚಕ" ನಾಟಕಗಳು ಬಂದವು. ವೆಂಕಟರಾವ್ ತಳಗೇರಿಯವರು ಸಕ್ರಿಯವಾಗಿ ಅಂದು ಕೇಂದ್ರದಲ್ಲಿ ಭಾಗವಹಿಸುತ್ತಿದ್ದರು.

ಹಿಂದಿನ ಬಾಂಬೆ ಪ್ರೆಸಿಡೆನ್ಸಿ ಸರಕಾರ ಪ್ರತಿವರ್ಷ ಹಲವಾರು ಭಾಷೆಗಳಲ್ಲಿ ನಾಟಕಗಳ ಸ್ಪರ್ಧೆಯನ್ನು ನಡೆಸುತ್ತಿದ್ದು, 1960ರ ನಂತರ, ಅಂದರೆ ಮಹಾರಾಷ್ಟ್ರ ರಾಜ್ಯ ಮೊದಲಾದ ನಂತರ ಈ ಸ್ಪರ್ಧೆಗಳನ್ನು ಕೈಬಿಟ್ಟಿತು. 1956ರಿಂದ 61ರ ವರೆಗೆ ಕೇಂದ್ರವೂ ಕೂಡ ಈ ಕನ್ನಡ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸುತ್ತಿತ್ತು. ಸರ್ಕಾರದ ಆಶ್ರಯ ಹೋದ ನಂತರ ಕೇಂದ್ರವೇ ತನ್ನ ಸ್ವಂತ ಶಕ್ತಿಯಿಂದ 1965ರಲ್ಲಿ ಮೊದಲ ಕನ್ನಡ ನಾಟಕೋತ್ಸವನ್ನು ಏರ್ಪಡಿಸಿತು. ಹಲವಾರು ಕನ್ನಡ ಸಂಸ್ಥೆಗಳು ನಾಟಕಗಳನ್ನು ಆಡುತ್ತಿದ್ದರೂ ಕೂಡ ಅವುಗಳಿಗೆ ಯಾವ ಒಂದು ಕೇಂದ್ರವೇದಿಕೆ ಇರಲಿಲ್ಲ. ಕನ್ನಡ ಕಲಾ ಕೇಂದ್ರ ಈ ಕೇಂದ್ರ ಬಿಂದುವಾಗಿ ರೂಪುಗೊಂಡಿತು. 1965ರಿಂದ ಇಂದಿನವರೆಗೆ ಮುಂಬಯಿಯ ಎಲ್ಲಾ ನಾಟಕ ತಂಡಗಳೂ ಕೂಡ ಕೇಂದ್ರದ ವೇದಿಕೆಯ ನೆರವಿನಿಂದ ತಮ್ಮ ಕಲೆಯನ್ನು ಮುಂಬಯಿಯ ಕನ್ನಡಿಗರ ಮುಂದಿಡಲು ಸಫಲವಾದವು. ಕನ್ನಡ ರಂಗ ಭೂಮಿಯ ಇತಿಹಾಸ ಮುಂಬಯಿಯಲ್ಲಿ ಏನೇ ಇರಲಿ, ಅದು ಕೇಂದ್ರದ ನಾಟಕೋತ್ಸವದ ನಂತರವೇ ಅರಳಿತು ಅಂದರೆ ಅತಿಶಯೋಕ್ತಿಯಾಗುವುದಿಲ್ಲ. ಹಲವಾರು ಕಲಾಕಾರರು, ದಿಗ್ದರ್ಶಕರು ತಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಕೇಂದ್ರ ಅನುವಾಯಿತು. ಅಷ್ಟೇ ಅಲ್ಲ ನಾಟಕಗಳನ್ನು ಬರೆಯುವ ಹುಮ್ಮಸ್ಸೂ ಕೂಡಾ ಹಲವಾರು ಸಾಹಿತಿಗಳಲ್ಲಿ ಮೂಡಿತು.

ಕೇಂದ್ರ, ಮುಂಬಯಿಯ ನಾಟಕ ತಂಡಗಳಷ್ಟೇ ಅಲ್ಲದೆ, ಕನ್ನಡ ನಾಡಿನ ಎಲ್ಲಾ ತಂಡಗಳನ್ನೂ ಆಹ್ವಾನಿಸಿ, ಅವರ ಕಲೆಯ ಪರಿಚಯವನ್ನು ಮುಂಬಯಿಯ ಕನ್ನಡಿಗರಿಗೆ ಮಾಡಿಕೊಟ್ಟಿತು. ಶ್ರೀ ಬಿ. ವಿ. ಕಾರಂತರ ನೇತೃತ್ವದಲ್ಲಿ ಬೆನಕ ತಂಡ 'ಹಯವದನ', 'ಜೋಕುಮಾರಸ್ವಾಮಿ', ಸತ್ತವರ ನೆರಳು' ಮುಂತಾದ ನಾಟಕಗಳನ್ನು 1976ರಲ್ಲಿ ಬಂದು ಪ್ರದರ್ಶಿಸಿದ್ದು ಇಲ್ಲಿ ಎಲ್ಲರೂ ನೆನೆಯ ಬಹುದಾಗಿದೆ. ದೆಹಲಿಯ ಕನ್ನಡಭಾರತಿ, ಧಾರವಾಡದ, ಕಾಸರಗೋಡು, ಮಂಗಳೂರು, ಬಳ್ಳಾರಿ, ಸೊಲ್ಲಾಪುರದ ಎಲ್ಲಾ ತಂಡಗಳು ಕೇಂದ್ರದ ನಾಟಕೋತ್ಸವಗಳಲ್ಲಿ ಪಾಲ್ಗೊಂಡಿವೆ.

ಕೇವಲ ಇನ್ನಿತರ ತಂಡಗಳ ನಾಟಕಗಳನ್ನಷ್ಟೇ ಅಲ್ಲದೆ ಕೇಂದ್ರ ತನ್ನ ಸ್ವಂತ ನಾಟಕಗಳನ್ನು ತಯಾರಿಸಿ ಆಡಿಸಿದೆ. 20ಕ್ಕೂ ಮಿಕ್ಕು ನಾಟಕಗಳನ್ನೂ ಹಲವಾರು ಹೆಸರಾಂತ ದಿಗ್ದರ್ಶಕರಿಂದ ತಯಾರಿಸಿ ಪ್ರದರ್ಶಿಸಿದ ಕೀರ್ತಿ ಕೇಂದ್ರದ್ದಾಗಿದೆ "ಸತ್ಯಂ ವದ ಧರ್ಮಂ ಚರ" 50ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆ. ವೆಂಕಟರಾವ್ ತಳಗೆರಿ, ಸದಾನಂದ ಸುವರ್ಣ, ಕೆ. ಜೆ. ರಾವ್, ಡಾ. ಮಂಜುನಾಥ್ ಮುಂತಾದ ದಿಗ್ದರ್ಶಕರು ನಾಟಕಗಳನ್ನು ಕೇಂದ್ರಕ್ಕಾಗಿ ನಿರ್ದೇಶಿಸಿದ್ದಾರೆ. 1990ರ ಜನವರಿಯಲ್ಲಿ ಕೇಂದ್ರ ತನ್ನ 25ನೆಯ ನಾಟಕೋತ್ಸವವನ್ನೂ ಜರಗಿಸುತ್ತಿರುವುದು ಶ್ಲಾಘನೀಯ. ಈ ನಾಟಕೋತ್ಸವದಲ್ಲಿ ಬೆಂಗಳೂರಿನ ಮೂರು ಹೆಸರಾಂತ ತಂಡಗಳು ಭಾಗವಹಿಸುತ್ತಿವೆ. ಗುಬ್ಬಿ ವೀರಣ್ಣನವರ ಮೊಮ್ಮಗಳು ಮತ್ತು ಹೆಸರಾಂತ ದಿಗ್ದರ್ಶಕಿ ಬಿ. ಜಯಶ್ರೀ ನಿರ್ದೇಶಿಸಿದ 'ವೈಶಾಖ' ಕೂಡ ಈ ನಾಟಕೊತ್ಸವದಲ್ಲಿ ಭಾಗವಹಿಸುತ್ತಿದೆ. ಚದುರಂಗರ ಕಾದಂಬರಿ ನಾಟಕರೂಪ. ಇತ್ತೀಚಿನ ನಾಟಕದಲ್ಲಿ ಅತಿ ಶ್ರೇಷ್ಠ ನಾಟಕವೆಂದು ಆಗಲೇ ಹೆಸರು ಮಾಡಿದೆ. ಜಯಶ್ರೀಯವರ "ಕರಿಮಾಯಿ", "ಲಕ್ಷಾಪತಿ ರಾಜನ ಕಥೆ"ಗಳನ್ನು ಮುಂಬಯಿ ನೋಡುಗರು ನೆನೆಯುತ್ತಾರೆ. ಪ್ರಯೋಗ ರಂಗದಿಂದ "ಮಂಟೆಸ್ವಾಮಿ ಕಥಾ ಪ್ರಸಂಗ" 1989-90 ಅತ್ಯುತ್ತಮ ನಾಟಕಗಳಲ್ಲಿ ಒಂದಾಗಿದೆ. ಜನಪದ ಶೈಲಿಯ ಈ ನಾಟಕ ರಾಷ್ಟ್ರೀಯ ಮಟ್ಟದಲ್ಲಿ ಆಗಲೇ ಗಮನ ಸೆಳೆದಿದೆ. ಈ ನಾಟಕೋತ್ಸವ ಒಂದು ರಸದೌತಣ ವಾಗುವುದರಲ್ಲಿ ಸಂದೇಹವಿಲ್ಲ.

ಕಾಲು ಶತಮಾನ ಕನ್ನಡ ರಂಗಭೂಮಿಯನ್ನು ಕೇವಲ ತನ್ನ ಸ್ವಶಕ್ತಿಯಿಂದ, ಮುಂಬಯಿಯಲ್ಲಿ ಬೆಳೆಸಿದ ಕನ್ನಡ ಕಲಾ ಕೇಂದ್ರಕ್ಕೆ ನೇಸರುವಿನ ಹಾರೈಕೆಗಳು.

## ಕನ್ನಡ ಕಲಾ ಕೇಂದ್ರ

## SILVER JUBILEE DRAMA FESTIVAL- 1991

ಕರ್ನಾಟಕದ ಅತ್ಯುತ್ತಮ ಮೂರು ನಾಟಕಗಳನ್ನು ಮುಂಬಯಿಯ ಕನ್ನಡಿಗರ ಮುಂದಿಡಲು ಹರ್ಷಿಸುತ್ತೇವೆ.

ತಾ. 16-1-1991 ಬುಧವಾರ ಸಂಜೆ 7-00ಕ್ಕೆ 'ಅಂತರಂಗ' ಬೆಂಗಳೂರು ಅವರ "ಹಾವಿಲ್ಲದ ಹುತ್ತ" ನಿ : ಅಮರ್

ತಾ. 17-1-1991 ಗುರುವಾರ ಸಂಜೆ 7-00ಕ್ಕೆ 'ಪ್ರಯೋಗರಂಗ' ಬೆಂಗಳೂರು ಅವರ "ಮಂಟೆಸ್ವಾಮಿ ಕಥಾಪ್ರಸಂಗ"

ನಿ : ಸುರೇಶ್ ಆನಗಳ್ಳಿ

ತಾ. 18-1-1991 ಶುಕ್ರವಾರ ಸಂಜೆ 7-00ಕ್ಕೆ 'ಸ್ಪಂದನ' ಬೆಂಗಳೂರು ಅವರ "ವೈಶಾಖ"

ನಿ : ಬಿ. ಜಯಶ್ರೀ

ಸ್ಥಳ : ರವೀಂದ್ರ ನಾಟ್ಯ ಮಂದಿರ , ಪ್ರಭಾದೇವಿ.

ಉತ್ಸವದ ದರ : ರೂ. 40/-, 25/-, & 15/-

*(ಪುಟ3 ರಿಂದ)*

ಅಲ್ಲಿ ಮದನ ಮೋಹನ ಮಾಳವೀಯರ ಪರಿಚಯವಾಗಿ ದಯಾನಂದ ಸರಸ್ವತಿಯವರ ಶುಕ್ಲತೀರ್ಥದ ಆಶ್ರಮದಲ್ಲಿ ಮೂರು ವರ್ಷಗಳ ಕಾಲ ಉಪಾಧ್ಯಾರಾಗಿ ಕಳೆದರು. 1932ರಲ್ಲಿ ಮುಂಬಯಿಗೆ ಹಿಂದಿರುಗಿ ಬಂದರು.

ಖಾಲ್ಸಾ ಕಾಲೇಜಿನಲ್ಲಿ ಈ ಸಂಸ್ಕೃತ ಪಂಡಿತರು ಕನ್ನಡ ಪ್ರಾಧ್ಯಾಪಕರಾಗಿ ನೇಮಕರಾದರು. ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಶಿಕ್ಷಣ ಮೊದಲಾದುದು ಇಂತು. ಇವರ ಸಂಸ್ಕೃತ ಪ್ರತಿಭೆ ಹರಡಿ, ಅಂಬೇಡ್ಕರ್ ಮತ್ತು ಕ್ಷಮಾರಾವ್ ಇವರ ಶಿಷ್ಯರಾಗಿ ಬಂದರು. ಈ ಕಾಲದಲ್ಲಿಯೇ ಶಾಸ್ತ್ರಿಗಳು ಮಹಾತ್ಮರ "ಸತ್ಯಶೋಧನಂ" ಗ್ರಂಥವನ್ನು ಸಂಸ್ಕೃತಕ್ಕೆ ಗದ್ಯವಾಗಿ ಅನುವಾದಿಸಿದರು. ಸಾಹಿತ್ಯ ಅಕಾಡೆಮಿ ಈ ಗ್ರಂಥವನ್ನು 1960ರಲ್ಲಿ ಪ್ರಕಟಿಸಿತು.

ಗೌತಮ ಸಿದ್ಧಾರ್ಥನ "ಶ್ರೀಮದ್ ಬುದ್ಧ ಭಾಗವತಂ" 1962ರಿಂದ 1964ರ ನಡುವಿನಲ್ಲಿ ಕಾವ್ಯವಾಗಿ ರೂಪುಗೊಂಡಿತು. ಶಾಸ್ತ್ರಿಗಳು ಮುಂಬೈಯಲ್ಲಿ 1964ರ ಮೆ ತಿಂಗಳಲ್ಲಿ ತಮ್ಮ ಕಡೆಯ ಉಸಿರೆಳೆದರು. ಶಾಸ್ತ್ರಿಗಳ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು 80ಕ್ಕೂ ಮಿಕ್ಕು ಜಗತ್ತಿನ ಎಲ್ಲೆಡೆಯಲ್ಲಿ ಇಂದು ಹರಡಿದ್ದಾರೆ. ಇವರ ಮಗಳು ಪ್ರಾ। ಕಮಲಾ ಶಾಸ್ತ್ರಿ ವಿಲ್ಸನ್ ಮತ್ತು ಕೀರ್ತಿ ಕಾಲೇಜುಗಳಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ದುಡಿದಿದ್ದಾರೆ. ಅನೇಕ ಮೊಮ್ಮಕ್ಕಳು ವೈದ್ಯರಾಗಿ, ಕಲಾಕಾರರಾಗಿ ಅಮೆರಿಕಾದಲ್ಲಿ ನೆಲೆಸಿದಿದ್ದಾರೆ. ನಾಟಕಕಾರ ಡಾ। ಮಂಜುನಾಥ್, ಶಾಸ್ತ್ರಿಯವರ ಮೊಮ್ಮಗ.

ಈ ಹೆಸರಾಂತ ಸಂಸ್ಕೃತ ಸಾಹಿತಿಯೇ ಮುಂಬಯಿಯ ಮೊಟ್ಟಮೊದಲ ಕನ್ನಡ ಪ್ರಾಧ್ಯಾಪಕ ಎಂದು ಪ್ರಾ. ಚಿದಂಬರ ದೀಕ್ಷಿತ್ ಹಾಗೂ ಪ್ರಾ. ಸುನೀತಾ ಶೆಟ್ಟಿಯವರು ಹೇಳುತ್ತಾರೆ.

Regn. No. 040015/86
Regn. No. MH/BY/NE121/90



# DR. V. SHANTARAM -- THE LAST OF THE LEGENDS

*- By Sridhar Sharma*

With the death of V. Shantaram, a legendary giant passed away from the Indian Film Industry. He was 89 when he breathed his last.

The legendary film maker succumbed to a massive cardiac arrest on October 27, 1991 after being hospitalised for over two months. He is survived by all his three wives, two sons, five daughters, twelve grand children and three great grand children. Kiran Shantaram, now head of Rajkamal Empire said - "Father was getting better, He had celebrated Diwali and Dussehra. We did not except him to leave us so soon ".

Born in Kolhapur on November 18, 1901, he never liked a School career and took up various odd jobs at a young age itself. At the age of 13, he joined Gandharva Natak Mandali and started acting in the dramas. Shantaram's cousins were Bhalji Pendharkar, Baburao Pendharkar and Master Vinayak who were already there in the film inustry in Kolhapur.

Shantarm's success strory is a lesson in how relentless toil pays. Baburao Painter of the Maharashtra Film Company become Shantram's guru, inducting him to do various odd jobs. In 1923, Shantaram made his debut in painter's 'Maya Bazar' and two years later worked as a hero in painter's 'Sarkari Pash'. Due to some resons, Shantaram, Shaikh Fathelal, V. Domle and Keshavrao Dhaiber started Prabhat Film Company on 1st June 1929. It was set up in a ramshackle shed on borrowed money in Kolhapur and they began poducing some silent and later on talkie films.

The first Prabhat talkie 'Ayodyaecha Raja' was directed by Shantaram. In 1930, he made 'Swarajya Torar (renamed as Udaykal) and 'Rani Saheba' inspite of censor hurdles from Britishers.

In 1933, he directed his first colour film 'Sairandheri' which was processed in



*The Author with V. Santaram*

Germany. But the film flopped. Undeterred, he and his colleagues formed a new studio near Pune's Deccan gymkhana. In 1934, Shantaram directed 'Amrit Manthan', followed by 'Dharmatma'. It was in 1937 with 'Duniya Na Mane' ('Kunku' in Marathi) that Shantaram embarked on socially committed films. This was followed by 'Aadmi' (Manoos) depicting the social repurcussions of love between a policeman and a prostitute. In 1943, Shantaram parted company with his colleagues and shifted to Bombay and made 'Shakuntala' under his own banner of Rajkamal Kalamandir. Three years, later, he made 'Dr. Kotnis Ki Amar Kahani', the only Indian Film shot partly in China. In 1947, he made 'Matwala Shair Ramjoshi' with Baburao painter as co-director. In 1952, 'Amar Bhopali' got Shantaram the prestigeous Cannes Award for 'best technical aspects'. In 1955, he presented to his audience a popular dance and song spectacle through his film 'Jhanak Jhanak Payel Baje', presenting kathak dance for the lay audience. Then followed 'Toofan our Diya' and 'Do ankhen Bara Hath' in which he suffered an eye injury during the shooting of the film. The film won the National Award as well as the Silver Bear at the Film Festival.

In 1959, he made 'Navrang' followed by Stree (1961), Sehra (1963), Boond Jo Ban Gaya Moti (1967), Jal Ban Machiali Nritya Bin Bijili (1969). In 1970, Shantaram turned to production of Marathi Films with Sandhya as a tamasha Dancer in PINJRA. Another significant film of Shantaram was 'Chaani', the story of illegitimate child born to a British officer and a tribal women. In 1963, he also made a film 'Palatak' in Bengali language. All these films had Shantaram's distintive dramatic style. 'Zanjer' was his last completed film in which he introduced his grandson Sushant, but it did not attract crowds as his other films did.

A true nationalist, his film always had a patriotic ferver. His films won recognition at national and international film festivals. His legacy to Indian cinema is staggering. Historicals, love stories, fantasises, dance extravaganza mythologicals - have been directed by V. Shantaram with success. In 1986, he was given the prestigeous Dadasaheb Phalke Award.

It is estimated that he has produced over 84 films, directed 55 and acted in 25 films in different languages. He has also made 11 shorts and documentaries in a career of over 70 years. Shantaram was member of the film adivisory Board, Film Enquiry Committee, Censor Board, all set up by the centre, apart from being on other numerous Commitiees. He was the founder member of the Children's Film Society of India and Presided over it for six years.

The last of the legends, Shantaram's name is indelibly linked with Indian Cinema. With his death, a whole brilliant era in Indian Cinema comes to an end and there will not be another film maker with the kind of idealism that Shantaram exhibited and we shall never be able to see the like of him.

Edited, Printed & Published by M. A. N. Prasad on behalf of The Mysore Association, Bombay
Laser Typeset and Printed at Aarati Art Printers, Fort, Bombay-400 001. Phone : 286 33 61